MGNREGA/02/01/2018

# ಜಿಲ್ಲಾ ಪಂಚಾಯತ ಕಾರ್ಯಾಲಯ ಕಲಬುರಗಿ

ಸಂ:ಜಿಪಕ:ಅನಿ:ಉಖಾಯೋ02: 64:2015-16

ದಿನಾಂಕ: 02.01.2018

ಗೆ,
ಆಯುಕ್ತರು, ಗ್ರಾಮೀಣಾಭಿವೃದ್ಧಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: External Evaluation forwarding of draft evaluation report (DER) On the study of "Evaluation of External Status Study of Migration of Labour to and from Karnataka" regarding.

ಉಲ್ಲೇಖ: ಸರ್ಕಾರದ ಪತ್ರ ಸಂ:ಗ್ರಾಅಪ:272:ಉಖಾಯೋ:2015 ದಿನಾಂಕ:14.07.2017 ಮತ್ತು 13.12.2017.

****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ಮೌಲ್ಯಮಾಪನ ಮತ್ತು ಅಧ್ಯಯನ ಮಾಡಿರುವ ಸಂಸ್ಥೆಯವರು ಕಳುಹಿಸಿರುವ ಕಾರ್ಯಕಾರಿ ಸಾರಾಂಶದ ವರದಿಗೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಗಳಲ್ಲಿ ಕೂಲಿ ಕಾರ್ಮಿಕರು ವಲಸೆ ಹೋಗದಂತೆ ತೆಗೆದುಕೊಂಡ ಕ್ರಮದ ಹಿಮ್ಮಾಯಿತಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದವರು ಕೋರಿರುವ ಪ್ರಯುಕ್ತ ತಕ್ಷಣ ವರದಿಯನ್ನು ಕಳುಹಿಸಿಕೊಡುವಂತೆ ಕೋರಿರುತ್ತೀರಿ.

ಪ್ರಯುಕ್ತ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಯಶಸ್ವಿ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕೆ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಕ್ರಮವಹಿಸಿದ ವಿವರಗಳು ಈ ಕೆಳಗಿನಂತಿವೆ:

1. ಜಿಲ್ಲಾ/ತಾಲೂಕು ಹಾಗೂ ಗ್ರಾಮ ಪಂಚಾಯತ ಮಟ್ಟದ ಅಧಿಕಾರಿಗಳನ್ನು ಪ್ರತಿಯೊಂದು ಗ್ರಾಮ ಪಂಚಾಯತಗೆ ನೋಡಲ್ ಅಧಿಕಾರಿಗಳಾಗಿ ನಿಯುಕ್ತಿಗೊಳಿಸಿದೆ. ಈ ಅಧಿಕಾರಿಗಳು ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಕೃಷಿಕರು, ಕೂಲಿಕಾರರು, ಮಹಿಳಾ ಸಂಘಗಳು, ಎಸ್.ಸಿ/ಎಸ್.ಟಿ ಕಾಲೋನಿಗಳ ಸಮುದಾಯಗಳ ಸಭೆ ನಡೆಸಿ, ಉದ್ಯೋಗ ಖಾತರಿ ಯೋಜನೆಯ ಲಾಭಗಳ ಬಗ್ಗೆ ವಿವರಿಸಿ, ತಮ್ಮ ತಮ್ಮ ಜಮೀನಿನಲ್ಲಿ ಕೆಲಸ ಕೈಗೊಳ್ಳುವಂತೆ ಹಾಗೂ ಕೆಲಸಕ್ಕೆ ಬರುವಂತೆ ಪ್ರೇರೆಪಿಸುವ ಕಾರ್ಯವನ್ನು ಮಾಡಲಾಗಿರುತ್ತದೆ.
2. ಪ್ರತಿ ಗ್ರಾಮಗಳಲ್ಲಿ ಗರಿಷ್ಠ 20 ಕೂಲಿಕಾರರ ಗುಂಪುಗಳನ್ನು ರಚಿಸಿ, ಕಾಯಕಬಂಧು ಪದ್ದತಿಯಡಿ ಯೋಜನೆ ಅನುಷ್ಠಾನಗೊಳಿಸಲು ಕ್ರಮಜರುಗಿಸಲಾಗಿದೆ.
3. ಕಾಯಕಬಂಧು, ಗ್ರಾಮ ಕೂಲಿ ಸಹಾಯಕ ಮತ್ತು ಬೇರಫೂಟ ಟೆಕ್ನಿಷಿಯನ್ಸರವರನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಕಾರ್ಯಪ್ರವೃತ್ತರಾಗಿ ಕೂಲಿಕಾರ್ಮಿಕರು ಬೇರೆ ಸ್ಥಳಗಳಿಗೆ ವಲಸೆ ಹೋಗದಂತೆ ಕ್ರಮವಹಿಸಲು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ನಿರ್ದೇಶಕರು, ನರೇಗಾ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳನ್ನು ನಿಯೋಜಿಸಿ ಸೂಕ್ತ ಕ್ರಮವಹಿಸಲು ನಿರ್ದೇಶಿಸಲಾಗಿದೆ.
4. ಕೂಲಿಕಾರರ ಎಸ್.ಸಿ./ಎಸ್.ಟಿ. ಸಮುದಾಯದ ಕಾಲೋನಿ/ ಜನವಸತಿ ಪ್ರದೇಶಗಳಿಗೆ ಭೇಟಿ ನೀಡಿ ನಮೂನೆ-1ನ್ನು ವಿತರಿಸಿ ಉದ್ಯೋಗ ಚೀಟಿಗಳನ್ನು ವಿತರಿಸಲು ಹಾಗೂ ನಮೂನೆ-6ರಲ್ಲಿ ಅರ್ಜಿ ಪಡೆದು ಕೂಲಿ ಕಾರ್ಮಿಕರಿಗೆ ತಕ್ಷಣ ಕೆಲಸ ಒದಗಿಸುವ ವ್ಯವಸ್ಥೆ ಮಾಡಲಾಗಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 31/3
ದಿನಾಂಕ 22.01.2018
ಗಣಕ ಸಂಖ್ಯೆ
ದಿನಾಂಕ

5. ದಿನಾಂಕ:22.02.2016 ರಿಂದ 29.02.2016ರ ನಡುವೆ ಪ್ರತಿ ಗ್ರಾಮಗಳಿಗೆ ಕಾಯಕರಥದ ಮೂಲಕ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಹೆಚ್ಚು ಪರಿಣಾಮಕಾರಿ ಅನುಷ್ಠಾನ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
6. ಜಿಲ್ಲೆಯಲ್ಲಿ ಬ್ಯಾಂಕಿಂಗ ಸಿಎಸ್‌ಪಿಗಳಿಗೆ ಗ್ರಾಮ ಪಂಚಾಯತಗಳಲ್ಲಿ ಸ್ಥಳಾವಕಾಶ ಒದಗಿಸಿ ಗ್ರಾಹಕರ ಸೇವಾ ಪ್ರತಿನಿಧಿ (CSP) ಗಳನ್ನು ಕಾರ್ಯನಿರ್ವಹಿಸಲು ಅನುವಾಗುವಂತೆ MGNREGS ಅಡಿಯಲ್ಲಿ ಅತಿಹೆಚ್ಚು ಮಾನವ ದಿನಗಳು ಸೃಜನೆಯಾಗಿರುವ ಗ್ರಾಮ ಪಂಚಾಯತಗಳ ಕೂಲಿ ಕಾರ್ಮಿಕರ ಮನೆ ಬಾಗಿಲಿಗೆ ಹಣ ಸಂದಾಯದ ವ್ಯವಸ್ಥೆ ಮಾಡಲಾಗಿರುತ್ತದೆ.
7. ಗ್ರಾಹಕರ ಸೇವಾ ಪ್ರತಿನಿಧಿ (CSP) ವ್ಯವಸ್ಥೆ ಮೂಲಕ ಗ್ರಾಮ ಪಂಚಾಯತಗಳಲ್ಲಿ ಪ್ರತಿ ಸೋಮವಾರ ಕೂಲಿಕಾರರ ನೇರವಾಗಿ ಹಣ ಸಂದಾಯದ ವ್ಯವಸ್ಥೆ ಕೈಗೊಳ್ಳಲಾಗಿದೆ.
8. ರೇಡಿಯೋ ಕಾರ್ಯಕ್ರಮ ಮೂಲಕ ಉದ್ಯೋಗ ಖಾತರಿ ಯೋಜನೆಯ ಕೆಲಸದಲ್ಲಿ ತೊಡಗಿಸಿಕೊಳ್ಳಲು ಕಲಬುರಗಿ ಜಿಲ್ಲೆಯ ಎಲ್ಲಾ ಕಾರ್ಮಿಕರಿಗೆ ತಿಳುವಳಿಕೆ ನೀಡುವ ವ್ಯವಸ್ಥೆ ಕೈಗೊಳ್ಳಲಾಗಿದೆ.
9. ಗೋಡೆಬರಹ, ಫ್ಲ್ಯಾಕ್ಸಬೋರ್ಡ (ಹೋರ್ಲ್ಡಿಂಗ ಬೋರ್ಡ) ಮೂಲಕ ಯೋಜನೆಯ ಅನುಷ್ಠಾನದ ಬಗ್ಗೆ ಮಾಹಿತಿ ಪ್ರಕಟಿಸಲಾಗಿರುತ್ತದೆ.
10. ದಿನಪತ್ರಿಕೆಗಳ ಮೂಲಕ ಎಲ್ಲಾ ರೈತ ಬಾಂಧವರು, ಕೃಷಿ ಕಾರ್ಮಿಕ ಸೋದರ/ಸೋದರಿಯರು ಪ್ರತಿಜ್ಞೆ ಮಾಡಿ ಗೂಳೆ ಹೋಗದೆ ಮಹಾತ್ಮಗಾಂಧಿ ನರೇಗಾ ಯೋಜನೆಯ ಪ್ರಯೋಜನ ಪಡೆಯಲು ದಿನಪತ್ರಿಕೆಯಲ್ಲಿ ಜಾಹಿರಾತುಗಳ ಮೂಲಕ ಕೋರಲಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಿರುವ ಮಾಹಿತಿಯನ್ನು ತಮ್ಮ ದಯಾಪರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಲಗತ್ತು: ದಿನಪತ್ರಿಕೆಯಲ್ಲಿ ಪ್ರಕಟಿಸಿದ
ಜಾಹಿರಾತುಗಳ ಪ್ರತಿಗಳು

ತಮ್ಮ ವಿಶ್ವಾಸಿ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಕಲಬುರಗಿ

ಪ್ರತಿಯನ್ನು: ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, #842, 5ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಡಾ/ಅಂಬೇಡ್ಕರ ವಿಧಿ, ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ.

# ಜಿಲ್ಲಾ ಪಂಚಾಯತ್, ಕಲಬುರಗಿ

ನಿತಿನ ವೆಂಕಯ್ಯ ಗುತ್ತೇದಾರ
ಅಧ್ಯಕ್ಷರು
ಜಿಲ್ಲಾ ಪಂಚಾಯತ್, ಕಲಬುರಗಿ

Nitin Venkayya Guttedar
President
Zilla Panchayat, Kalaburagi

Off. Tele : 08472 - 278608 - Resi : 08472 - 278808 - Cell : 9845405555 mail : presidentzpglb@gmail.com




# ರೈತರು ಹಾಗೂ ರೈತ ಕೃಷಿ ಕಾರ್ಮಿಕರಲ್ಲಿ ಮನವಿ.

ಕಲಬುರಗಿ ಜಿಲ್ಲೆಯು ಸಧ್ಯ ಭೀಕರ ಬರಗಾಲ ಪರಿಸ್ಥಿತಿ ಎದುರಿಸುತ್ತಿದ್ದು ಸರ್ಕಾರವು ಬರ ಪೀಡಿತ ಜಿಲ್ಲೆ ಎಂದು ಘೋಷಿಸಿರುತ್ತದೆ. ಕೇಂದ್ರ ಅಧ್ಯಯನ ತಂಡ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾನು ಖುದ್ದು ತಂಡವನ್ನು ಭೇಟಿ ಮಾಡಿ ಬರದ ಪರಿಸ್ಥಿತಿಯ ಮನವರಿಕೆ ಮಾಡಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೂಲಿ ಕಾರ್ಮಿಕ ಕೆಲಸವನ್ನು 100 ದಿನಗಳಿಂದ 150 ದಿನಗಳವರಿಗೆ ಹೆಚ್ಚಿಸಲು ಮನವಿ ಮಾಡಿರುತ್ತೇನೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ ಕೆಲಸವನ್ನು 150 ದಿನಗಳಿಗೆ ಹೆಚ್ಚಿಸಿರುತ್ತದೆ.

ಜಿಲ್ಲೆಯಲ್ಲಿ ಬರದ ಪರಿಸ್ಥಿತಿಯಿಂದ ದೀಪಾವಳಿ ನಂತರ ಕೆಲಸ ಅರಸಿ ಗುಳೆ ಹೋಗುವುದು ಸಾಮಾನ್ಯವಾಗಿರುತ್ತದೆ. ಆದರೆ ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಪ್ರತಿ ಕುಟುಂಬಕ್ಕೆ 150 ದಿನಗಳ ಉದ್ಯೋಗ ಪಡೆಯುವ ಅವಕಾಶ ಇರುವುದರಿಂದ, ಗುಳೆ ಹೋಗದೆ ನಮ್ಮ ರೈತರು ಮತ್ತು ರೈತ ಕೃಷಿ ಕಾರ್ಮಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಈ ದಿಶೆಯಲ್ಲಿ ಜಿಲ್ಲಾ ಪಂಚಾಯತ ಕಲಬುರಗಿಯು ದಿನಾಂಕ 24-11-2015 ರಂದು ರೈತ ಹಾಗೂ ಕೃಷಿ ಕಾರ್ಮಿಕರ ಸಭೆಗಳನ್ನು ಆಯೋಜಿಸಿದೆ. ಈ ಸಂದರ್ಭದಲ್ಲಿ ನಾವೆಲ್ಲರು ಗುಳೆ ಹೋಗದೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಪಡೆಯುವ ಪ್ರತಿಜ್ಞೆ ಮಾಡಬೇಕಿದೆ.

ಎಲ್ಲಾ ರೈತ ಬಾಂಧವರು, ಕೃಷಿ ಕಾರ್ಮಿಕ ಸೋದರ/ಸೋದರಿಯರು ಪ್ರತಿಜ್ಞೆಯನ್ನು ಮಾಡಿ, ಗುಳೆ ಹೋಗದೆ ಉದ್ಯೋಗ ಖಾತ್ರಿ ಯೋಜನೆಯ ಪ್ರಯೋಜನವನ್ನು ಪಡೆಯಲು ಈ ಮನವಿ ಮೂಲಕ ಕೋರುತ್ತೇನೆ.

ಸ್ಥಳ:-ಕಲಬುರಗಿ.
ದಿನಾಂಕ:-21-11-2015.

ಅಧ್ಯಕ್ಷರು
ಜಿಲ್ಲಾ ಪಂಚಾಯತ,ಕಲಬುರಗಿ.


ನಂ.1-78.2. ಶಾಂತಿನಿಕೇತನ - ಮಿನಿವಿಧಾನಸೌಧ ಎದುರುಗಡೆ - ಐವಾನ-ಇ-ಶಾಹಿ ರಸ್ತೆ - ಕಲಬುರಗಿ - 585 102 - ಕರ್ನಾಟಕ
# 1-78/2, Shantiniketan - Opp. Mini Vidhan Soudha Aiwan-E-Shahi Road, Kalaburagi - 585 102 - Karnataka



ಅಧ್ಯಕ್ಷರು, ಗ್ರಾ.ಪಂ.
ಭಂಕೂರ

ಉಪಾಧ್ಯಕ್ಷರು, ಗ್ರಾ.ಪಂ.
ಭಂಕೂರ.

ಪಿಡಿಓ, ಗ್ರಾ.ಪಂ.
ಭಂಕೂರ.

ಸರ್ವ ಸದಸ್ಯರು, ಗ್ರಾಮ ಪಂಚಾಯತ ಕಾರ್ಯಾಲಯು, ಭಂಕೂರ. ತಾ: ಚಿತ್ತಾಪೂರ ಜಿ: ಕಲಬುರಗಿ


# ಜಿಲ್ಲಾ ಪಂಚಾಯತ್, ಕಲಬುರಗಿ


ನಿತೀನ ವೆಂಕಯ್ಯ ಗುತ್ತೇದಾರ
ಅಧ್ಯಕ್ಷರು
ಜಿಲ್ಲಾಪಂಚಾಯತ್, ಕಲಬುರಗಿ

Nitin Vankayya Guttedar
President
Zilla Panchayat, Kalaburagi

Off. Tele : 08472 - 278608 - Resi : 08472 - 278808 - Cell " 9845405555 mail : presidentzpglb@gmail.com


## ರೈತರು ಹಾಗೂ ರೈತ ಕೃಷಿ ಕಾರ್ಮಿಕರಲ್ಲಿ ಮನವಿ.



ಕಲಬುರಗಿ ಜಿಲ್ಲೆಯು ಸಧ್ಯ ಭೀಕರ ಬರಗಾಲ ಪರಿಸ್ಥಿತಿ ಎದುರಿಸುತ್ತಿದ್ದು ಸರ್ಕಾರವು ಬರ ಪೀಡಿತ ಜಿಲ್ಲೆ ಎಂದು ಘೋಷಿಸಿರುತ್ತದೆ. ಕೇಂದ್ರ ಅಧ್ಯಯನ ತಂಡ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾನು ಖುದ್ದು ತಂಡವನ್ನು ಭೇಟಿ ಮಾಡಿ ಬರದ ಪರಿಸ್ಥಿತಿಯ ಮನವರಿಕೆ ಮಾಡಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೂಲಿ ಕಾರ್ಮಿಕ ಕೆಲಸವನ್ನು 100 ದಿನಗಳಿಂದ 150 ದಿನಗಳವರಿಗೆ ಹೆಚ್ಚಿಸಲು ಮನವಿ ಮಾಡಿರುತ್ತೇನೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ ಕೆಲಸವನ್ನು 150 ದಿನಗಳಿಗೆ ಹೆಚ್ಚಿಸಿರುತ್ತದೆ.

ಜಿಲ್ಲೆಯಲ್ಲಿ ಬರದ ಪರಿಸ್ಥಿತಿಯಿಂದ ದೀಪಾವಳಿ ನಂತರ ಕೆಲಸ ಅರಸಿ ಗುಳೆ ಹೋಗುವುದು ಸಾಮಾನ್ಯವಾಗಿರುತ್ತದೆ. ಆದರೆ ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಪ್ರತಿ ಕುಟುಂಬಕ್ಕೆ 150 ದಿನಗಳ ಉದ್ಯೋಗ ಪಡೆಯುವ ಅವಕಾಶ ಇರುವುದರಿಂದ, ಗುಳೆ ಹೋಗದೆ ನಮ್ಮ ರೈತರು ಮತ್ತು ರೈತ ಕೃಷಿ ಕಾರ್ಮಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಈ ದಿಶೆಯಲ್ಲಿ ಜಿಲ್ಲಾ ಪಂಚಾಯತ ಕಲಬುರಗಿಯು ದಿನಾಂಕ 24-11-2015 ರಂದು ರೈತ ಹಾಗೂ ಕೃಷಿ ಕಾರ್ಮಿಕರ ಸಭೆಗಳನ್ನು ಆಯೋಜಿಸಿದೆ. ಈ ಸಂದರ್ಭದಲ್ಲಿ ನಾವೆಲ್ಲರು ಗುಳೆ ಹೋಗದೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಪಡೆಯುವ ಪ್ರತಿಜ್ಞೆ ಮಾಡಬೇಕಿದೆ.

ಎಲ್ಲಾ ರೈತ ಬಾಂಧವರು, ಕೃಷಿ ಕಾರ್ಮಿಕ ಸೋದರ/ಸೋದರಿಯರು ಪ್ರತಿಜ್ಞೆಯನ್ನು ಮಾಡಿ, ಗುಳೆ ಹೋಗದೆ ಉದ್ಯೋಗ ಖಾತ್ರಿ ಯೋಜನೆಯ ಪ್ರಯೋಜನವನ್ನು ಪಡೆಯಲು ಈ ಮನವಿ ಮೂಲಕ ಕೋರುತ್ತೇನೆ.

ಅಧ್ಯಕ್ಷರು
ಜಿಲ್ಲಾ ಪಂಚಾಯತ, ಕಲಬುರಗಿ.

ಸ್ಥಳ :- ಕಲಬುರಗಿ.
ದಿನಾಂಕ :- 21-11-2015.


ನಂ. 1-78/2, ಶಾಂತಿನಿಕೇತನ - ಮಿನಿವಿಧಾನಸೌಧ ಎದುರುಗಡೆ - ಐವಾನ-ಇ-ಶಾಹಿ ರಸ್ತೆ - ಕಲಬುರಗಿ - 585 102 - ಕರ್ನಾಟಕ
# 1-78/2, Shantiniketan - Opp. Mini Vidhan Soudha Aiwan-E-Shahi Road, Kalaburagi - 585 102 - Karnataka.


ನಗರದಲ್ಲಿ ರವಿವಾರ ಸುದ್ದಿ
ಮಾತನಾಡಿದ ಅವರು, ರಾ
ತೊಗಲಿನ ಸರಕಾರ ಆಡಳಿತ
ಜನರ ನಿಟ್ಟುಸಿರು, ರೈತರ ಸ
ಕೂಲಿ ಕಾರ್ಮಿಕರ ಗೋಳು
ಕೇಳಿಸಿಕೊಳ್ಳುವ ಧಾವಂತದಲ್ಲಿ
ಇಲ್ಲ. ಅದರಿಂದಾಗಿ ಜನರು
ಇಳಿದಿದ್ದಾರೆ. ಅದರ ಭಾಗವಾಗಿ
ಜೇವರ್ಗಿ ತಾಲೂಕಿನಲ್ಲಿ ಪಾದಂ
ಧರಣೆ ನಡೆಯುತ್ತಿದೆ. ಅದರ ವಿ
ಮಿನಿವಿಧಾನಸೌಧದಲ್ಲಿರುವ
ಕಚೇರಿಗೆ 500 ಎತ್ತಿನ ಗಾಡಿ
ಹೋಗಿ ಧರಣೆ ಆರಂಭಿಸಲಾಗು
ತಿಳಿಸಿದರು. ಒಳ್ಳೆಯ ದೃಷ್ಟಿಯಿಂದ
ಕಚೇರಿಗೆ ಪ್ರವೇಶ ನೀಡಿದರೆ
ಹೋದರೆ ಅದೇ ಎತ್ತಿನ ಗಾಡಿಗಳ
ಹೆದ್ದಾರಿಯಲ್ಲಿ ಪ್ರತಿಭಟನೆ ನಡೆ
ಎಂದು ಎಚ್ಚರಿಸಿದರು.

ಜೇವರ್ಗಿ ಶಾಸಕರಿಗೆ
ಬೇಜವಾಬ್ದಾರಿ ಇದೆ ಎನ್ನುವುದು
ವಿಧಾನಸಭೆ ಅಧಿವೇಶನದಲ್ಲಿ
ರೀತಿಯಿಂದ ತಿಳಿದಿದೆ. ಇಂತಹ
ಕಲ್ಲುಹೃದಯಕ್ಕೆ ಜನರು ತಕ್ಕ ಪಾ

## ಹಳೆ ವಿ



ಕಲಬುರಗಿ: ನೂತನ ವಿದ್ಯಾ

ಕಲಬುರಗಿ: ನಗರದ ಖ್ಯಾ
ವಿದ್ಯಾಲಯ ಸಂಸ್ಥೆಯ
ಶಾಲೆಯಲ್ಲಿ 1988-89ನೆ
10ನೇ(ಬ) ತರಗತಿಯಲ್ಲಿ
ವಿದ್ಯಾರ್ಥಿಗಳೆಲ್ಲರೂ ಒಗ್ಗೂಡಿ
ಬೋಧಿಸಿದ ಗುರುಗಳೆಲ್ಲರ
ಗುರುವಂದನೆ ಸಲ್ಲಿಸಿದರು.

ವಿದ್ಯಾರ್ಥಿ ಜೀವನ
ನೆನಪು ಎನ್ನುವಂತೆ ದೇಶ-ವಿ
ಸಹಪಾಠಿಗಳೆಲ್ಲರೂ ಕೂಡು
ಅಪರೂಪ. 1988-99
ವಿದ್ಯಾರ್ಥಿಗಳೆಲ್ಲರೂ ಒಗ್ಗೂಡಿ
ವಿನಿಮಯ ಮಾಡಿಕೊಳ್ಳು
ಗುರುಗಳಿಗೆ ಗೌರವ ವಂದನೆ

ಖ್ಯಾತ ವೈದ್ಯ ಬಿ. ಸ
ಅಧ್ಯಕ್ಷತೆಯಲ್ಲಿ ನಡೆದ ಕಾ

# ಜಿಲ್ಲಾ ಪಂಚಾಯತ್, ಕಲಬುರಗಿ

ನಿತೀನ ವೆಂಕಯ್ಯ ಗುತ್ತೇದಾರ
ಅಧ್ಯಕ್ಷರು
ಜಿಲ್ಲಾ ಪಂಚಾಯತ್, ಕಲಬುರಗಿ

Nitin Venkayya Guttedar
President
Zilla Panchayat, Kalaburagi

Off. Tele : 08472 - 278608 - Resi ; 08472 - 278808 - Cell : 9845405555 mail : presidentzpglb@gmail.com




# ರೈತರು ಹಾಗೂ ರೈತ ಕೃಷಿ ಕಾರ್ಮಿಕರಲ್ಲಿ ಮನವಿ.

ಕಲಬುರಗಿ ಜಿಲ್ಲೆಯು ಸಧ್ಯ ಭೀಕರ ಬರಗಾಲ ಪರಿಸ್ಥಿತಿ ಎದುರಿಸುತ್ತಿದ್ದು ಸರ್ಕಾರವು ಬರ ಪೀಡಿತ ಜಿಲ್ಲೆ ಎಂದು ಘೋಷಿಸಿರುತ್ತದೆ. ಕೇಂದ್ರ ಅಧ್ಯಯನ ತಂಡ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾನು ಖುದ್ದು ತಂಡವನ್ನು ಭೇಟಿ ಮಾಡಿ ಬರದ ಪರಿಸ್ಥಿತಿಯ ಮನವರಿಕೆ ಮಾಡಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೂಲಿ ಕಾರ್ಮಿಕ ಕೆಲಸವನ್ನು 100 ದಿನಗಳಿಂದ 150 ದಿನಗಳವರಿಗೆ ಹೆಚ್ಚಿಸಲು ಮನವಿ ಮಾಡಿರುತ್ತೇನೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ ಕೆಲಸವನ್ನು 150 ದಿನಗಳಿಗೆ ಹೆಚ್ಚಿಸಿರುತ್ತದೆ.

ಜಿಲ್ಲೆಯಲ್ಲಿ ಬರದ ಪರಿಸ್ಥಿತಿಯಿಂದ ದೀಪಾವಳಿ ನಂತರ ಕೆಲಸ ಅರಸಿ ಗುಳೆ ಹೋಗುವುದು ಸಾಮಾನ್ಯವಾಗಿರುತ್ತದೆ. ಆದರೆ ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಪ್ರತಿ ಕುಟುಂಬಕ್ಕೆ 150 ದಿನಗಳ ಉದ್ಯೋಗ ಪಡೆಯುವ ಅವಕಾಶ ಇರುವುದರಿಂದ, ಗುಳೆ ಹೋಗದೆ ನಮ್ಮ ರೈತರು ಮತ್ತು ರೈತ ಕೃಷಿ ಕಾರ್ಮಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಈ ದಿಶೆಯಲ್ಲಿ ಜಿಲ್ಲಾ ಪಂಚಾಯತ ಕಲಬುರಗಿಯು ದಿನಾಂಕ 24-11-2015 ರಂದು ರೈತ ಹಾಗೂ ಕೃಷಿ ಕಾರ್ಮಿಕರ ಸಭೆಗಳನ್ನು ಆಯೋಜಿಸಿದೆ. ಈ ಸಂದರ್ಭದಲ್ಲಿ ನಾವೆಲ್ಲರು ಗುಳೆ ಹೋಗದೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಪಡೆಯುವ ಪ್ರತಿಜ್ಞೆ ಮಾಡಬೇಕಿದೆ.

ಎಲ್ಲಾ ರೈತ ಬಾಂಧವರು, ಕೃಷಿ ಕಾರ್ಮಿಕ ಸೋದರ/ಸೋದರಿಯರು ಪ್ರತಿಜ್ಞೆಯನ್ನು ಮಾಡಿ, ಗುಳೆ ಹೋಗದೆ ಉದ್ಯೋಗ ಖಾತ್ರಿ ಯೋಜನೆಯ ಪ್ರಯೋಜನವನ್ನು ಪಡೆಯಲು ಈ ಮನವಿ ಮೂಲಕ ಕೋರುತ್ತೇನೆ.

ಸ್ಥಳ:-ಕಲಬುರಗಿ.
ದಿನಾಂಕ:-21-11-2015.

ಅಧ್ಯಕ್ಷರು
ಜಿಲ್ಲಾ ಪಂಚಾಯತ,ಕಲಬುರಗಿ.

ಜಿಲ್ಲಾ ಪಂಚಾಯತ್, ಕಲಬುರಗಿ

...ವೆಂಕಯ್ಯ ಗುತ್ತೇದಾರ
...ಪಂಚಾಯತ್, ಕಲಬುರಗಿ

Nitin Venkayya Guttedar
President
Zilla Panchayat, Kalaburagi

...ff. Tele : 08472 - 278608 - Resi : 08472 - 278808 - Cell : 9845405555 mail : presidentzpglb@gmail.com



# ರೈತರು ಹಾಗೂ ರೈತ ಕೃಷಿ ಕಾರ್ಮಿಕರಲ್ಲಿ ಮನವಿ.

ಕಲಬುರಗಿ ಜಿಲ್ಲೆಯು ಸಧ್ಯ ಭೀಕರ ಬರಗಾಲ ಪರಿಸ್ಥಿತಿ ಎದುರಿಸುತ್ತಿದ್ದು ಸರ್ಕಾರವು ಬರ ಪೀಡಿತ ಜಿಲ್ಲೆ ಎಂದು ಘೋಷಿಸಿರುತ್ತದೆ. ಕೇಂದ್ರ ಅಧ್ಯಯನ ತಂಡ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾನು ಖುದ್ದು ತಂಡವನ್ನು ಭೇಟಿ ಮಾಡಿ ಬರದ ಪರಿಸ್ಥಿತಿಯ ಮನವರಿಕೆ ಮಾಡಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೂಲಿ ಕಾರ್ಮಿಕ ಕೆಲಸವನ್ನು 100 ದಿನಗಳಿಂದ 150 ದಿನಗಳವರೆಗೆ ಹೆಚ್ಚಿಸಲು ಮನವಿ ಮಾಡಿರುತ್ತೇನೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ ಕೆಲಸವನ್ನು 150 ದಿನಗಳಿಗೆ ಹೆಚ್ಚಿಸಿರುತ್ತದೆ.

ಜಿಲ್ಲೆಯಲ್ಲಿ ಬರದ ಪರಿಸ್ಥಿತಿಯಿಂದ ದೀಪಾವಳಿ ನಂತರ ಕೆಲಸ ಅರಸಿ ಗುಳೆ ಹೋಗುವುದು ಸಾಮಾನ್ಯವಾಗಿರುತ್ತದೆ. ಆದರೆ ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಪ್ರತಿ ಕುಟುಂಬಕ್ಕೆ 150 ದಿನಗಳ ಉದ್ಯೋಗ ಪಡೆಯುವ ಅವಕಾಶ ಇರುವುದರಿಂದ, ಗುಳೆ ಹೋಗದೆ ನಮ್ಮ ರೈತರು ಮತ್ತು ರೈತ ಕೃಷಿ ಕಾರ್ಮಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಈ ದಿಶೆಯಲ್ಲಿ ಜಿಲ್ಲಾ ಪಂಚಾಯತ ಕಲಬುರಗಿಯು ದಿನಾಂಕ 24-11-2015ರಂದು ರೈತ ಹಾಗೂ ಕೃಷಿ ಕಾರ್ಮಿಕರ ಸಭೆಗಳನ್ನು ಆಯೋಜಿಸಿದೆ. ಈ ಸಂದರ್ಭದಲ್ಲಿ ನಾವೆಲ್ಲರು ಗುಳೆ ಹೋಗದೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಪಡೆಯುವ ಪ್ರತಿಜ್ಞೆ ಮಾಡಬೇಕಿದೆ.

ಎಲ್ಲಾ ರೈತ ಬಾಂಧವರು, ಕೃಷಿ ಕಾರ್ಮಿಕ ಸೋದರ/ಸೋದರಿಯರು ಪ್ರತಿಜ್ಞೆಯನ್ನು ಮಾಡಿ, ಗುಳೆ ಹೋಗದೆ ಉದ್ಯೋಗ ಖಾತ್ರಿ ಯೋಜನೆಯ ಪ್ರಯೋಜನವನ್ನು ಪಡೆಯಲು ಈ ಮನವಿ ಮೂಲಕ ಕೋರುತ್ತೇನೆ.

ಸ್ಥಳ:-ಕಲಬುರಗಿ.
ದಿನಾಂಕ:-21-11-2015.

ನಿತಿನ ವೆಂಕಯ್ಯ ಗುತ್ತೇದಾರ
ಅಧ್ಯಕ್ಷರು,
ಜಿಲ್ಲಾ ಪಂಚಾಯತ ಕಲಬುರಗಿ.

Advt.

... ಮೂಲಕ ಕೋರುತ್ತೇನೆ.

ಸ್ಥಳ:-ಕಲಬುರಗಿ.
ದಿನಾಂಕ:-21-11-2015.

ಅಧ್ಯಕ್ಷರು
ಜಿಲ್ಲಾ ಪಂಚಾಯತ,ಕಲಬುರಗಿ.

...ನಂ.1-78.2, ಶಾಂತಿನಿಕೇತನ - ಮಿನಿವಿಧಾನಸೌಧ ಎದುರುಗಡೆ - ಐವಾನ-ಇ-ಶಾಹಿ ರಸ್ತೆ - ಕಲಬುರಗಿ - 585 102 - ಕರ್ನಾಟಕ
... 1-78/2, Shantiniketan - Opp. Mini Vidhan Soudha Aiwan-E-Shahi Road, Kalaburagi - 585 102 - Karnataka

LABOUR

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಾಇ 361 ಎಲ್‌ಇಟಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 07.03.2019.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ & ಮುಖ್ಯ ಕಾರ್ಯನಿರ್ವಣಾಧಿಕಾರಿ,
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ
ಕಾರ್ಮಿಕರ ಕಲ್ಯಾಣ ಮಂಡಳಿ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು.

ಮಾನ್ಯರೆ,

**ವಿಷಯ:** ಕಾರ್ಮಿಕ ಇಲಾಖೆಯ ಯೋಜನೆಗಳ ಮೌಲ್ಯಮಾಪನ ಅಧ್ಯಯನಗಳು.

**ಉಲ್ಲೇಖ:**
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಪತ್ರ ದಿನಾಂಕ: 22.02.2019.
2. ಇದೇ ಸಮ ಸಂಖ್ಯೆಯ ಪತ್ರ ದಿನಾಂಕ: 05.10.2018.

K.F

*******

ಇದೇ ಸಮ ಸಂಖ್ಯೆಯ ಪತ್ರ ದಿನಾಂಕ: 05.10.2018 ರ ಕಡೆ ತಮ್ಮ ಗಮನವನ್ನು ಸೆಳೆಯಲಾಗಿದೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ, ಕರ್ನಾಟಕಕ್ಕೆ ಮತ್ತು ಕರ್ನಾಟಕದಿಂದ ಕಾರ್ಮಿಕರ ವಲಸೆಯ ಬಾಹ್ಯ ಸ್ಥಿತಿಯ ಅಧ್ಯಯನ ಕೈಗೊಂಡಿರುವ ಬಗ್ಗೆ ಹಾಗೂ ಮೌಲ್ಯಮಾಪನ ಅಧ್ಯಯನದ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳ ಬಗ್ಗೆ ಕೈಗೊಂಡಿರುವ ಕ್ರಮದ ಕುರಿತು ವರದಿಯನ್ನು ಕೂಡಲೇ ಒದಗಿಸುವಂತೆ ಕೋರಿರುತ್ತಾರೆ. ಸದರಿ ಪತ್ರದಲ್ಲಿರುವ ವಿಷಯದ ಬಗ್ಗೆ ಪರಿಶೀಲಿಸಿ, ಕೋರಿರುವ **ಮಾಹಿತಿಯನ್ನು ಜರೂರಾಗಿ ಸಂಬಂಧಪಟ್ಟವರಿಗೆ ಒದಗಿಸುವಂತೆ** ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 288/4
ದಿನಾಂಕ 12/3/14
ಗಣಕ ಸಂಖ್ಯೆ
ದಿನಾಂಕ

1203

ತಮ್ಮ ವಿಶ್ವಾಸಿ,

(ಜಿ.ಎಂ. ಸಿದ್ದರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**ಪ್ರತಿಯನ್ನು ಮಾಹಿತಿಗಾಗಿ:** ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ & ಸಾಂಖ್ಯಿಕ ಇಲಾಖೆ ರವರಿಗೆ.

ಡಾ॥ ಶಾಲಿನಿ ರಜನೀಶ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ ಸಚಿವಾಲಯ
ಕೊಠಡಿ ಸಂಖ್ಯೆ: 701, 3ನೇ ಹಂತ
7ನೇ ಮಹಡಿ, ಬಹುಮಹಡಿಗಳ ಕಟ್ಟಡ
ದೂರವಾಣಿ: 22252352 ; 22032726,
e-mail:prsplanning@gmail.com

ಅ.ಸ.ಪತ್ರ ಸಂಖ್ಯೆ: ಕೆಇಎ/51/ಎಟಿಆರ್ (ಮೌಅ) 2019

ದಿನಾಂಕ: 22-02-2019

ಮಾನ್ಯ ಶ್ರೀ ಅಮ್ಲಾನ್ ಆದಿತ್ಯ ಬಿಸ್ವಾಸ್‌ರವರೆ,

ವಿಷಯ: ಕಾರ್ಮಿಕ ಇಲಾಖೆಯ ಮೌಲ್ಯಮಾಪನ ಅಧ್ಯಯನ ವರದಿಗಳ ಶಿಫಾರಸ್ಸುಗಳ ಮೇಲೆ ಕೈಗೊಂಡಿರುವ ಕ್ರಮಗಳ ವರದಿಯ ಕುರಿತು.

ಉಲ್ಲೇಖ: ದಿ: 10.04.2017ರಂದು ನಡೆದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 4ನೇ ಸಾಮಾನ್ಯ ಸಭಾ ನಡವಳಿಗಳು.

*****

ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಕರ್ನಾಟಕಕ್ಕೆ ಮತ್ತು ಕರ್ನಾಟಕದಿಂದ ಕಾರ್ಮಿಕರ ವಲಸೆಯ ಬಾಹ್ಯ ಸ್ಥಿತಿಯ ಅಧ್ಯಯನ ಕೈಗೊಂಡಿರುವ ಬಗ್ಗೆ ಹಾಗೂ ಮೌಲ್ಯಮಾಪನ ಅಧ್ಯಯನದ ವರದಿಯನ್ನು ತಮ್ಮ ಇಲಾಖೆಗೆ ಕಳುಹಿಸಲಾಗಿದ್ದು, ವರದಿಯಲ್ಲಿ ನೀಡಲಾಗಿರುವ ಶಿಫಾರಸ್ಸುಗಳ, ಬಗ್ಗೆ ಕೈಗೊಂಡಿರುವ ಕ್ರಮದ ಕುರಿತು ವರದಿಯನ್ನು ಕಳುಹಿಸಿಕೊಡುವಂತೆ ಈಗಾಗಲೇ ತಮ್ಮನ್ನು ಕೋರಲಾಗಿರುತ್ತದೆ.

ದಿನಾಂಕ: 10.04.2017ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 4ನೇ ಸಾಮಾನ್ಯ ಸಭಾ ನಡವಳಿಯ ಪ್ರಕಾರ, ಮೌಲ್ಯಮಾಪನ ಅಧ್ಯಯನಗಳ ಬಗ್ಗೆ ಕೈಗೊಂಡಿರುವ ಕ್ರಮದ ವರದಿಯನ್ನು ಪ್ರತಿ ಮಾಹೆ ನಡೆಯುವ ಕೆಡಿಪಿ ಸಭೆಯಲ್ಲಿ ವಿಮರ್ಶೆ ಕಾರ್ಯಸೂಚಿಯಾಗಿ ಸೇರಿಸಲು ನಿರ್ಧರಿಸಲಾಗಿರುತ್ತದೆ.

ಆದ್ದರಿಂದ, ಈ ಮೌಲ್ಯಮಾಪನ ಅಧ್ಯಯನದಲ್ಲಿ ಮಾಡಿರುವ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ, ಕೈಗೊಂಡಿರುವ ಕ್ರಮದ ಬಗ್ಗೆ ವರದಿಯನ್ನು ಕೂಡಲೇ ಕಳುಹಿಸುವಂತೆ ಮತ್ತೊಮ್ಮೆ ಕೋರಲಾಗಿದೆ.

ತಮ್ಮ ವಿಶ್ವಾಸಿ

ಶ್ರೀ ಅಮ್ಲಾನ್ ಆದಿತ್ಯ ಬಿಸ್ವಾಸ್, ಭಾಆಸೇ
ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ
ವಿಕಾಸ ಸೌಧ
ಬೆಂಗಳೂರು.